# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ಹಾಗೂ

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆ

(ನ್ಯಾಕ್‌ನಿಂದ 'ಎ' ಗ್ರೇಡ್ ಮಾನ್ಯತೆ)

ನವನಗರ, ಹುಬ್ಬಳ್ಳಿ - 580 025

ಆಯೋಜಿಸುತ್ತಿರುವ

# ಅಲ್ಪಾವಧಿಯ ಭಾಷಾಂತರ ಕಾರ್ಯಾಗಾರ (ಒನ್ ಕ್ರೆಡಿಟ್ ಕೋರ್ಸ್)

ದಿನಾಂಕ: 13 ರಿಂದ 20ನೇ ಜುಲೈ 2021

## ತಮಗೆಲ್ಲರಿಗೂ ಆತ್ಮೀಯ ಸ್ವಾಗತ



**ಪ್ರೊ. ಪಿ. ಈಶ್ವರ ಭಟ್**
ಉಪಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ



**ಪ್ರೊ. ಜಿ. ಬಿ. ಪಾಟೀಲ**
ಕುಲಸಚಿವರು (ಮೌಲ್ಯಮಾಪನ), ಕರಾಕಾವಿ



**ಪ್ರೊ. ರತ್ನಾ ಭರಮಗೌಡರ್**
ಡೀನ್, ಕರಾಕಾವಿ



**ಮೊಹಮ್ಮದ ಝುಬೇರ ಎನ್.** ಕೆ.ಎ.ಎಸ್.
ಕುಲಸಚಿವರು, ಕರಾಕಾವಿ



# ಅಲ್ಪಾವಧಿಯ ಭಾಷಾಂತರ ತರಬೇತಿ ಕಾರ್ಯಾಗಾರದ ಮಾಹಿತಿ

## (ಒನ್ ಕ್ರೆಡಿಟ್ ಕೋರ್ಸ್)

ಮಾನವ ಜಗತ್ತಿನಲ್ಲಿ ಭಾಷೆಯು ಸಂಪರ್ಕ ಮಾಧ್ಯಮವಾಗಿ, ನಾಗರೀಕತೆಯ ಸಂಕೇತವಾಗಿ ಮಹತ್ತರ ಸ್ಥಾನವನ್ನು ವಹಿಸುತ್ತದೆ. ಅದಲ್ಲದೆ, ದೇಶದ ಸಾಂಸ್ಕೃತಿಕ ಪ್ರತಿನಿಧಿಯಾಗಿಯೂ ಭಾಷೆ ಗುರುತಿಸಿ ಕೊಳ್ಳುವುದರಿಂದ, ಒಂದು ರಾಷ್ಟ್ರದ ಸಂಸ್ಕೃತಿ, ಅಲ್ಲಿನ ಕಾನೂನುಗಳ ಸೂಕ್ಷ್ಮತೆಯನ್ನರಿಯಬೇಕಾದರೆ ಆ ರಾಷ್ಟ್ರದ ಭಾಷೆಯನ್ನರಿಯುವುದು ಅತಿ ಮುಖ್ಯವಾಗುತ್ತದೆ. ಹಾಗಾಗಿ, ಪರಭಾಷೆಯನ್ನರಿಯುವ, ಆ ಭಾಷೆಯ ಕೃತಿಗಳ ಅಧ್ಯಯನ ನಡೆಸುವ, ಅವುಗಳನ್ನು ತಮ್ಮ ಭಾಷೆಗೆ ಅನುವಾದಿಸುವ ಪರಂಪರೆ ಬಹಳ ಹಿಂದಿನಿಂದಲೂ ಪ್ರಚಲಿತದಲ್ಲಿದೆ. ಭಾರತದಲ್ಲಿ ಲಭ್ಯವಿರುವ ಕಾನೂನಿನ ಪುಸ್ತಕಗಳು ಮತ್ತು ಕಾನೂನಿಗೆ ಸಂಬಂಧಿಸಿದ ಕೃತಿಗಳು ಅಂದರೆ, ಕಾಯಿದೆಗಳ ಅರ್ಥವಿವರಣೆ, ಟೀಕೆ, ಟಿಪ್ಪಣಿಗಳಲ್ಲಿ ಹೆಚ್ಚಿನವು ಆಂಗ್ಲ ಭಾಷೆಯಲ್ಲಿವೆ. ನಾಡಿನ ಕಾನೂನುಗಳು ಜನಸಮಾನ್ಯರಿಗೆ ಅವರ ತಾಯ್ನುಡಿಯಲ್ಲಿ ಲಭ್ಯವಿದ್ದಾಗಲಷ್ಟೇ, ಕಾನೂನಿನ ಮೂಲ ಆಶಯವಾದ 'ಜನಸಾಮಾನ್ಯನಿಗೆ ಕಾನೂನು' ಎಂಬ ಪರಿಕಲ್ಪನೆ ನೆರವೇರಲು ಸಾಧ್ಯ.

ಈ ಹಿನ್ನಲೆಯಲ್ಲಿ, ಕಾನೂನು ಶಿಕ್ಷಣ ಕ್ಷೇತ್ರದಲ್ಲಿ ಮಹತ್ವಪೂರ್ಣ ಸ್ಥಾನದಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಜನಸಾಮಾನ್ಯರಿಗೆ ಕನ್ನಡದಲ್ಲಿ ಕಾನೂನನ್ನು ತಲುಪಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಇದರ ಭಾಗವಾಗಿ ಕನ್ನಡ ಕಾನೂನು ಕೃತಿ ರಚನಾಕಾರರಿಗೆ, ಅನುವಾದಕರಿಗೆ ಹಾಗೂ ನ್ಯಾಯಾಧೀಶರಾಗಲು ಬಯಸುವ ಉತ್ಸುಕ ಅಭ್ಯರ್ಥಿಗಳಿಗೆ ನೆರವಾಗುವ ಉದ್ದೇಶದಿಂದ ಈ ಅಲ್ಪಾವಧಿಯ ಭಾಷಾಂತರ ತರಬೇತಿ ಕಾರ್ಯಾಗಾರ (ಒನ್ ಕ್ರೆಡಿಟ್ ಕೋರ್ಸ್)ವನ್ನು ನಡೆಸಲು ಉದ್ದೇಶಿಸಿದೆ.

ಈ ತರಬೇತಿ ಕಾರ್ಯಾಗಾರದ ಮುಖ್ಯ ಉದ್ದೇಶಗಳೆಂದರೆ, ಇಂಗ್ಲಿಷ್ ಅಥವಾ ಲ್ಯಾಟಿನ್ ಭಾಷೆಯ ಪದಪುಂಜಗಳು ಮತ್ತು ಪದೋಕ್ತಿಗಳಿಗೆ ಸಮರ್ಪಕ ಕನ್ನಡ ಪದಗಳ ಬಳಕೆಯ ಕುರಿತಾದ ಮಾಹಿತಿ, ವಿಭಿನ್ನ ಕಾನೂನಿಗೆ ಹೊಂದುವಂತ ಸಮಂಜಸ ಭಾಷಾನುವಾದದ ತರಬೇತಿ, ಆಡಳಿತಾತ್ಮಕ ಆದೇಶಗಳು ಹಾಗೂ ನ್ಯಾಯಾಲಯಗಳ ತೀರ್ಪುಗಳ ಕನ್ನಡಾನುವಾದಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುವುದಾಗಿದೆ. ಅಲ್ಲದೆ ಕನ್ನಡದಲ್ಲಿರುವ ದಾಖಲೆ ಪತ್ರಗಳು, ಬರಹಗಳು ಹಾಗೂ ನ್ಯಾಯಾಲಯಗಳ ತೀರ್ಪುಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡುವ ತರಬೇತಿಯೂ ಈ ಕಾರ್ಯಾಗಾರದ ಭಾಗವಾಗಿದೆ. ಈ ಕಾರ್ಯಾಗಾರವು ಕಾನೂನು ಶಿಕ್ಷಕರು, ಕಾನೂನು ಕಲಿಕಾ ವಿದ್ಯಾರ್ಥಿಗಳು, ಇಂಗ್ಲಿಷ್ ಪಠ್ಯಗಳನ್ನು ಕನ್ನಡೀಕರಿಸಲು ಬಯಸುವ ಭಾಷಾನುವಾದಕರು, ಕನ್ನಡದಲ್ಲಿ ಕಾನೂನು ಪುಸ್ತಕಗಳನ್ನು ಬರೆಯಲು ಉತ್ಸುಕರಾದ ಲೇಖಕರು ಹಾಗೂ ಕಾನೂನನ್ನು ಪರಿಣಾಮಕಾರಿಯಾಗಿ ಅರ್ಥೈಸಿಕೊಳ್ಳಲು ಬಯಸುವ ಕಾನೂನೇತರ ಕ್ಷೇತ್ರಗಳ ಸಂಶೋಧಕರು ಮತ್ತು ಅಧಿಕಾರಿ ವರ್ಗದವರಿಗೂ ಸಹಕಾರಿಯಾಗಲಿದೆ. ನ್ಯಾಯಾಧೀಶರ ಆಯ್ಕೆ ಪ್ರಕ್ರಿಯೆಯ ಲಿಖಿತ ಪರೀಕ್ಷೆಯಲ್ಲಿ ಅನುವಾದಕ್ಕಾಗಿಯೆ ಪ್ರತ್ಯೇಕ ಪ್ರಶ್ನೆಪತ್ರಿಕೆಯನ್ನು ಮೀಸಲಿಡಲಾಗಿದ್ದು, ನ್ಯಾಯಾಧೀಶರಾಗಿ ಆಯ್ಕೆಯಾಗುವ ಅಭ್ಯರ್ಥಿಗೆ ಕನ್ನಡ ಕಾನೂನು ಪದ ಬಳಕೆ ಹಾಗೂ ಕನಿಷ್ಠ ಮಟ್ಟದ ಕನ್ನಡ ವ್ಯಾಕರಣ ಜ್ಞಾನದೊಂದಿಗೆ ಕನ್ನಡದಿಂದ ಇಂಗ್ಲಿಷಿಗೆ, ಮತ್ತು ಇಂಗ್ಲಿಷಿಂದ ಕನ್ನಡಕ್ಕೆ ಭಾಷಾಂತರಿಸುವ ಕಲೆಯು ಅತ್ಯಾವಶ್ಯಕವಾಗಿದೆ. ಹಾಗಾಗಿ, ನ್ಯಾಯಾಧೀಶರ ನೇಮಕಾತಿಯ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ವಕೀಲ ವೃಂದದವರಿಗೆ, ಈ ಕಾರ್ಯಾಗಾರವು ವಿಶೇಷವಾಗಿ ಸಹಕಾರಿಯಾಗಲಿದೆ.

ಈ ಅಲ್ಪಾವಧಿಯ ಭಾಷಾಂತರ ತರಬೇತಿ ಕಾರ್ಯಾಗಾರವು ಒನ್ ಕ್ರೆಡಿಟ್ ಕೋರ್ಸ್ (14 ಗಂಟೆಗಳ ಕಲಿಕಾ ತರಬೇತಿ ಕೋರ್ಸ್) ಆಗಿದ್ದು, ಆಸಕ್ತ ವಿದ್ಯಾರ್ಥಿಗಳಿಗೆ ತಲುಪಲೆಂಬ ಉದ್ದೇಶದಿಂದ ಈ ಕಾರ್ಯಾಗಾರವನ್ನು ಅಂತರ್ಜಾಲ ವೇದಿಕೆಯಲ್ಲಿ(ಝೂಮ್ ವೇದಿಕೆ) ನಡೆಸಲಾಗುತ್ತಿದ್ದು ವಿದ್ಯಾರ್ಥಿಗಳ ಸಮಯಾನುಕೂಲಕ್ಕಾಗಿ ಕಾರ್ಯಾಗಾರದ ಅವಧಿಯನ್ನು ಸಂಜೆ 4.00 ರಿಂದ 6.00 ಗಂಟೆಗಳವರೆಗೆ ನಿಗದಿಪಡಿಸಲಾಗಿದೆ. ಈ ಕಾರ್ಯಾಗಾರವು ಏಳು ದಿನಗಳ ಅವಧಿಯದ್ದಾಗಿದ್ದು, ಪ್ರತಿದಿನವೂ ಎರಡು ಉಪನ್ಯಾಸ ತರಗತಿಗಳಿರುತ್ತವೆ. ಮೊದಲರ್ಧ ಭಾಗದಲ್ಲಿ ಕಾನೂನು ಭಾಷಾ ಪರಿಣಿತರಿಂದ ಭಾಷಾನುವಾದದ ಕುರಿತಾದ ಉಪನ್ಯಾಸಗಳು (ತಾಂತ್ರಿಕ ತರಬೇತಿ) ನಡೆಯಲಿದ್ದು, ಎರಡನೇ ಭಾಗದಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಈ ಕಾರ್ಯಾಗಾರದಲ್ಲಿ ಮುಖ್ಯವಾಗಿ ಇಂಗ್ಲಿಷ್ ಭಾಷೆಯ ಪಠ್ಯ ಹಾಗೂ ತೀರ್ಪುಗಳ ಆಯ್ದಭಾಗಗಳನ್ನು ಕನ್ನಡಕ್ಕೆ ಹಾಗೂ ಕನ್ನಡದಿಂದ ಇಂಗ್ಲಿಷಿಗೆ ಅನುವಾದಿಸುವ ತರಬೇತಿಯೊಂದಿಗೆ, ಈ ಕುರಿತಾದ ಅಸೈನ್ಮೆಂಟ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ವಿದ್ಯಾರ್ಥಿಗಳ ಪ್ರತಿದಿನದ ಹಾಜರಾತಿಯು ಕಡ್ಡಾಯವಾಗಿದ್ದು, ಪ್ರತಿದಿನದ ಕೊನೆಯಲ್ಲಿ ನೀಡುವ ಅಸೈನ್ಮೆಂಟನ್ನು ಆಯಾ ದಿನದಂದೇ ಪೂರ್ಣಗೊಳಿಸಿ ಆಯೋಜಕರಿಗೆ ಸಲ್ಲಿಸಬೇಕು. ಕೊನೆಯ ದಿನದಂದು ವಿದ್ಯಾರ್ಥಿಗಳಿಗೆ ಒಂದು ಪರೀಕ್ಷೆಯನ್ನು ಏರ್ಪಡಿಸಲಾಗುವುದು ಹಾಗೂ ಒಂದು ತೀರ್ಪನ್ನು ಕನ್ನಡಕ್ಕೆ ತರ್ಜುಮೆಮಾಡಿ ಸಲ್ಲಿಸುವ ಅಸೈನ್ಮೆಂಟನ್ನೂ ನೀಡಲಾಗುವುದು. ಈ ಎಲ್ಲಾ ಕಾರ್ಯಗಳನ್ನು ನಿರ್ದಿಷ್ಟ ಸಮಯಾವಧಿಯೊಳಗೆ ಯಶಸ್ವಿಯಾಗಿ ಪೂರೈಸಿದ ವಿದ್ಯಾರ್ಥಿಗಳಿಗೆ ಮಾತ್ರ ಪ್ರಮಾಣಪತ್ರವನ್ನು ನೀಡಲಾಗುವುದು.

### ದಿನಾಂಕ ಮತ್ತು ಉಪನ್ಯಾಸಗಳ ವಿವರ

ಈ ಕಾರ್ಯಾಗಾರವು ಒನ್ ಕ್ರೆಡಿಟ್ ಕೋರ್ಸ್ ಅಂದರೆ, 14 ಘಂಟೆಗಳ ಕಲಿಕಾ ತರಬೇತಿ ಕೋರ್ಸ್ ಆಗಿದ್ದು ಪ್ರತಿದಿನ ಒಂದು ಘಂಟೆಯ ತಾಂತ್ರಿಕ ಉಪನ್ಯಾಸ ಹಾಗೂ ಒಂದು ಘಂಟೆಯ ಪ್ರಾಯೋಗಿಕ ಉಪನ್ಯಾಸ ತರಗತಿಗಳಿರುತ್ತವೆ.

### ಪ್ರವೇಶಾತಿ ಶುಲ್ಕ

ಈ ಕಾರ್ಯಾಗಾರಕ್ಕೆ ಪ್ರವೇಶಾತಿ ಶುಲ್ಕವಿರುವುದಿಲ್ಲ.

### ಪಾಲ್ಗೊಳ್ಳಬಹುದಾದ ವಿದ್ಯಾರ್ಥಿಗಳು

- ಅಂತಿಮ ವರ್ಷದ ಕಾನೂನು ವಿದ್ಯಾರ್ಥಿಗಳು
- ನ್ಯಾಯಾಧೀಶರ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳು.

### ಪಾಲ್ಗೊಳ್ಳುವಿಕೆಯ ಅವಕಾಶ ಮತ್ತು ಆಯ್ಕೆ ಪ್ರಕ್ರಿಯೆ

ಮೊದಲು ನೋಂದಣಿ ಮಾಡಿದ 100 ವಿದಾರ್ಥಿಗಳನ್ನು ಈ ಕೋರ್ಸಿಗೆ ಆಯ್ಕೆ ಮಾಡಲಾಗುವುದು.ಆಸಕ್ತ ವಿದ್ಯಾರ್ಥಿಗಳು ಈ ಅರ್ಜಿ ಸಲ್ಲಿಸಲು ಈ ಕೆಳಗಿನ ಗೂಗಲ್ ಫಾರ್ಮ್‌ನ್ನು ದಿನಾಂಕ 8 ಜುಲೈ 2021ರೊಳಗಾಗಿ ಭರ್ತಿಮಾಡಬೇಕು.

https://forms.gle/MQJoY8GZR7Kc1bCL6

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಈ-ಮೇಲ್ ವಿಳಾಸ:

ksluonecreditcourse@gmail.com

## ಅಲ್ಪಾವಧಿಯ ಕಾರ್ಯಾಗಾರದ ಆಯೋಜಕ ಸಮಿತಿಯ ಪದಾಧಿಕಾರಿಗಳು

### ಕಾರ್ಯಾಗಾರದ ಮುಖ್ಯಸ್ಥರು

**ಪ್ರೊ. (ಡಾ.) ಪಿ. ಈಶ್ವರ ಭಟ್**

ಉಪಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ

### ಕಾರ್ಯಾಗಾರದ ಜಂಟಿ ಆಯೋಜಕರು

**ಮೊಹಮ್ಮದ ಝುಬೇರ್ ಎನ್.** ಕೆ.ಎ.ಎಸ್.

ಕುಲಸಚಿವರು (ಆಡಳಿತ), ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ

**ಪ್ರೊ. (ಡಾ.) ರತ್ನಾ ಆರ್. ಭರಮಗೌಡರ್**

ಡೀನರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹಾಗೂ
ನಿರ್ದೇಶಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆ, ಹುಬ್ಬಳ್ಳಿ

**ಪ್ರೊ. (ಡಾ.) ಜಿ. ಬಿ. ಪಾಟೀಲ್**

ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ

| | |
|---|---|
| **ಶ್ರೀಮತಿ ಅರ್ಚನಾ ಕೆ.**<br>ಸಹಾಯಕ ಪ್ರಧ್ಯಾಪಕರು, ಕ.ರಾ.ಕಾ.ವಿ., ಹುಬ್ಬಳ್ಳಿ | ಶಿಕ್ಷಕ ಸಂಯೋಜಕರು |
| **ಡಾ. ಭೀಮಾಬಾಯಿ ಮೂಲಗೆ**<br>ಸಹಾಯಕ ಪ್ರಧ್ಯಾಪಕರು, ಕ.ರಾ.ಕಾ.ವಿ., ಹುಬ್ಬಳ್ಳಿ | ಶಿಕ್ಷಕ ಸಂಯೋಜಕರು |
| **ಶ್ರೀ ಗಿರೀಶ್ ಕೆ.ಸಿ.**<br>ಸಹಾಯಕ ಪ್ರಧ್ಯಾಪಕರು, ಕ.ರಾ.ಕಾ.ವಿ., ಹುಬ್ಬಳ್ಳಿ | ಶಿಕ್ಷಕ ಸಂಯೋಜಕರು |
| **ಡಾ. ರಂಗಸ್ವಾಮಿ ಡಿ.**<br>ಸಹಾಯಕ ಪ್ರಧ್ಯಾಪಕರು, ಕ.ರಾ.ಕಾ.ವಿ., ಹುಬ್ಬಳ್ಳಿ | ಶಿಕ್ಷಕ ಸಂಯೋಜಕರು |
| **ಡಾ. ಕುಮುದಾ ಕರೋಗಲ್**<br>ಸಹಾಯಕ ಪ್ರಧ್ಯಾಪಕರು, ಕ.ರಾ.ಕಾ.ವಿ., ಹುಬ್ಬಳ್ಳಿ | ಶಿಕ್ಷಕ ಸಂಯೋಜಕರು |
| **ಶ್ರೀ ಅಭಿಷೇಕ್ ಯಮನೂರ**<br>ಬೋಧನಾ ಸಹಾಯಕರು, ಕರಾಕಾವಿ, ಕಾನೂನು ಶಾಲೆ | ತಾಂತ್ರಿಕ ಸಂಯೋಜಕರು |
| **ಶ್ರೀ ಪ್ರತಾಪ ಸಿಂಗ್ ಜಾಧವ**<br>ಬೋಧನಾ ಸಹಾಯಕರು, ಕರಾಕಾವಿ, ಕಾನೂನು ಶಾಲೆ | ತಾಂತ್ರಿಕ ಸಂಯೋಜಕರು |
| **ಡಾ. ಸ್ಮಿತಾ ಅಂಗಡಿ**<br>ಬೋಧನಾ ಸಹಾಯಕರು, ಕರಾಕಾವಿ, ಕಾನೂನು ಶಾಲೆ | ತಾಂತ್ರಿಕ ಸಂಯೋಜಕರು |
| **ಶ್ರೀ ವೆಂಕಟೇಶ್ ಏಕಬೋಟೆ**<br>ಬೋಧನಾ ಸಹಾಯಕರು, ಕರಾಕಾವಿ, ಕಾನೂನು ಶಾಲೆ | ತಾಂತ್ರಿಕ ಸಂಯೋಜಕರು |

ನಿರ್ದೇಶಕರು
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆ, ನವನಗರ, ಹುಬ್ಬಳ್ಳಿ
ಮಿಂಚಂಚೆ : kslulawschool@gmail.com
ಫ್ಯಾಕ್ಸ್ : 0836-22223392, ದೂರವಾಣಿ : 0836-2222392
ಜಾಲತಾಣ : www.kslu.karnataka.gov.in